

ಕಥೆ



**ಎಚ್‌. ಆರ್‌. ರಮೇಶ**

ಕಲೆ: ವಿ.ಎಂ. ಮಂಜುನಾಥ್

# ಕರಿಮೂಗು

ಅವರಿಬ್ಬರು ಟೌನ್‌ಹಾಲಿನ ಕಾಂಪೌಂಡಿನ ಒಳಗೆ ಇರುವ ಪ್ರತಿಮೆಯ ಕೆಳಗೆ ಕುಳಿತುಕೊಂಡಿದ್ದರು. ಅವರು ಅಲ್ಲಿ ಬಂದು ಕುಳಿತು ಇಪ್ಪತ್ತು ನಿಮಿಷಗಳಾಗಿದ್ದವು. ವೈಶಾಖದ ಜಿಟಿಜಿಟಿ ಮಳೆ ಶುರುವಾಯಿತು. ಟೌನ್ ಹಾಲಿನ ಹಿಂಭಾಗದಲ್ಲಿ ಇದ್ದ ಒಂದು ಕಲ್ಲಿನ ಮೇಲೆ ಹೋಗಿ ಕುಳಿತರು. ಮಳೆಯ ಇರುಚಲು ಹನಿಗಳು ಅಲ್ಲಿಗೆ ಬಡಿಯುತ್ತಿರಲಿಲ್ಲ. ಆಗ ಆ ಸಮಯದಲ್ಲಿ ಅಲ್ಲಿ ಯಾರೂ ಇರಲಿಲ್ಲ. ಇವರು ಮಾತ್ರ. ಅವರು ಎದ್ದು ಹೋದದ್ದನ್ನು, ಅಲ್ಲಿ ನಿಂತ ಪ್ರತಿಮೆ ಮಳೆಯಲ್ಲಿ ನೆನೆಯುತ್ತಲೇ ನೋಡುತ್ತಿತ್ತು ಇವರ ಕಡೆಗೆ ದಿಟ್ಟಿಸಿ. ಪಕ್ಷಿಗಳ ಹಿಕ್ಕೆಯಿಂದ ತುಂಬಿ ಹೋಗಿದ್ದುದರಿಂದ ಪ್ರತಿಮೆಯ ವ್ಯಕ್ತಿ ವಿಕಾರವಾಗಿ ಮತ್ತು ಹಿಕ್ಕೆಯ ಬಿಳಿ ಬಣ್ಣದಿಂದಾಗಿ ಆ ವಿಕಾರದ ವಿಲಕ್ಷಣದಲ್ಲೇ ಒಂದು ಲಕ್ಷಣತೆ ಇತ್ತು. ಅದು ಸಮಾಜದ ಅಥವಾ ರಾಜಕೀಯದ ಸುಡು ಸುಡು ರೂಪಕವಾಗಿಯೂ ಕಾಣುತ್ತಿತ್ತು. ಜಿಟಿಜಿಟಿ ಮಳೆಗೆ ಹಿಕ್ಕೆ ನೆಂದು ಮಳೆಯ ಜಲದಲ್ಲಿ ಹಾಲಿನಂತೆ ಇಳಿಯುತ್ತಿತ್ತು. ಇದು ಮತ್ತೊಂದು ಸೊಬಗನ್ನು ಆ ಪ್ರತಿಮೆಗೆ ಕೊಡುತ್ತಿತ್ತು. ಅದರ ಮೂಗಿನ ತುದಿಯಿಂದ ಒಂದೊಂದೇ ಬಿಳಿಯ ಹನಿ ತೊಟ್ಟಿಕ್ಕುತ್ತಿದ್ದುದನ್ನು ಇಬ್ಬರೂ ನೋಡುತ್ತಿದ್ದರು. ಅವರಲ್ಲಿ ಒಬ್ಬ ಪ್ರತಿಮೆಯನ್ನು ಒಮ್ಮೆ ಮತ್ತು ತನ್ನ ಪಕ್ಕದಲ್ಲಿದ್ದವನನ್ನು ಒಮ್ಮೆ ನೋಡುತ್ತಿದ್ದ.

ಅವರಲ್ಲಿ ಒಬ್ಬನಿಗೆ ಮೂವತ್ತೆರಡು ವರ್ಷಗಳು. ಮತ್ತೊಬ್ಬನಿಗೆ ಅವನಿಗಿಂತ ಒಂದು ಆರು ತಿಂಗಳು ಕಡಿಮೆ. ಆದರೆ ಇಬ್ಬರೂ ಒಂದೇ ವಾರಿಗೆಯವರಂತೆ ಕಾಣುವರು. ಒಬ್ಬನ ಮೂಗು ಹಳೆಯದಾದ, ನಜ್ಜುಗುಜ್ಜಾದ ಅಲ್ಯುಮಿನಿಯಂ ಚೆಂಬಿನ ತರ ಇದೆ. ಮತ್ತು ಅದರ ಬಣ್ಣ ಥೇಟ್ ಕಪ್ಪು ಡಾಂಬರು. ಆದರೆ ತುಂಬ ಸೋಜಿಗದ ವಿಷಯವೆಂದರೆ ಅವನ ಇಡೀ ಮೈಯ ಬಣ್ಣ ಸಮುದ್ರದ ತಟದ ಮರಳಿನ ನುಣುಪು ಹಾಗೂ ಅದಕ್ಕೆ ಮಂಗೋಲಿಯನ್ನಿನ ಹೆಂಗಸರ ರೋಮವಿಲ್ಲದ ಮೀನಖಂಡದ ರೀತಿಯ ಮಿಂಚು. ದಾರಿಯಲ್ಲಿ ಅವನು ನಡೆದಾಡುತ್ತ ಹೋದಾಗ ಜನ ಕ್ಷಣ ಅವನತ್ತ ಒಂದು ನೋಟವನ್ನು ಬೀರಿಯೇ ಹೋಗುತ್ತಾರೆ. ಅವನ ಮೈಯ ಬಣ್ಣಕ್ಕೆ ಒಂತರದ ಕಾಂತೀಯ ಶಕ್ತಿ ಇದೆ. ಅವನಿಗೆ ತನ್ನ ಮೈಯ ಬಣ್ಣದ ಬಗೆಗೆ ಒಂದು ಎಳ್ಳು ಕಾಳಿನಷ್ಟೂ ಗಮನವಿಲ್ಲ. ಅವನು ದಿನದ ಇಪ್ಪತ್ತನಾಲಕ್ಕು ತಾಸು ಯೋಚಿಸುವುದು ತನ್ನ ಡಾಂಬರು ಬಣ್ಣದ ಕಪ್ಪು ಮೂಗಿನ ಬಗ್ಗೆಯೇ. ನೀವು ಸಹ ಅವನನ್ನು ನೋಡಿದರೆ ಹೀಗೂ ಉಂಟಾ ಅಥವಾ ನಿರೂಪಕ ಅತಿ ರಂಜನೀಯವಾಗಿ ಹೇಳುತ್ತಿರುವಂತಿದೆ ಎಂದು ಹೇಳಬಲ್ಲಿರಿ. ಆದರೆ ಇದು ನಿಜ.